

# ಬೆಳಕಿನ ಹಬ್ಬಕ್ಕೆ ಮಂಗಳಗಿರಿ ಸೀರೆ

ಮಂಗಳಗಿರಿ ಹ್ಯಾಂಡ್‌ಲೂಮ್ ಸಿಲ್ಕ್ ಸೀರೆಗಳು ಗರಿಗರಿಯಾಗಿ ಉಡಲು ಚೆನ್ನಾಗಿರುತ್ತವೆ. ಈ ಸೀರೆಗಳನ್ನು ಕಾಟನ್, ಕಾಟನ್ ಸಿಲ್ಕ್ ಫ್ಯಾಬ್ರಿಕ್ಸ್‌ನಿಂದ ತಯಾರಿಸಲಾಗುತ್ತಿದ್ದು, ಚಿನ್ನದ ದಾರದಿಂದ ಮಾಡಿದ ಬಾರ್ಡರ್ ಅಥವಾ ಝರಿ ಬಾರ್ಡರ್‌ನಿಂದ ಸೀರೆ ಆಕರ್ಷಕವಾಗಿ ಕಾಣುತ್ತದೆ.

■ ಯು. ವೇಣೂರು

ದೀಪಾವಳಿ ಎಂದರೆ 'ದೊಡ್ಡ ಹಬ್ಬ' ಎಂದೇ ಖ್ಯಾತಿ. ಒಡವೆ, ಉಡುಗೆಗಳಿಗೆ ವಿಶೇಷ ಆದ್ಯತೆ ಅಂದು. ಸಿಹಿತಿಂಡಿ, ಹಬ್ಬದಡುಗೆ, ಹೊಸ ಉಡುಗೆ, ಪಟಾಕಿ ಸಂಭ್ರಮದೊಂದಿಗೆ ಹೊಸ ವಿನ್ಯಾಸದ, ಕಣ್ಣಿಗೊಪ್ಪುವ ಆಕರ್ಷಕ ಬಣ್ಣಗಳ ಸೀರೆ ಉಟ್ಟರೆ ಹಬ್ಬದ ಸಂಭ್ರಮ ಇಮ್ಮಡಿಸಿದಂತೆಯೇ. ಕಾಂಜೀವರಂ, ಧರ್ಮಾವರಂ, ಬನಾರಸ್, ಮೊಳಕಾಲ್ಮುರು ಮುಂತಾದ ರೇಷ್ಮೆ ಸೀರೆಗಳ ಸಾಲಿಗೆ ಇದೀಗ ಹೊಸ ಸೇರ್ಪಡೆ 'ಮಂಗಳಗಿರಿ ಸೀರೆ'.

ಮಂಗಳಗಿರಿ ಹ್ಯಾಂಡ್‌ಲೂಮ್ ಸಿಲ್ಕ್ ಸೀರೆಗಳು ಗರಿಗರಿಯಾಗಿ ಉಡಲು ಚೆನ್ನಾಗಿರುತ್ತವೆ. ಈ ಸೀರೆಗಳನ್ನು ಕಾಟನ್, ಕಾಟನ್ ಸಿಲ್ಕ್ ಫ್ಯಾಬ್ರಿಕ್ಸ್‌ನಿಂದ ತಯಾರಿಸಲಾಗುತ್ತಿದ್ದು, ಚಿನ್ನದ ದಾರದಿಂದ ಮಾಡಿದ ಬಾರ್ಡರ್ ಅಥವಾ ಝರಿ ಬಾರ್ಡರ್‌ನಿಂದ ಸೀರೆ ಆಕರ್ಷಕವಾಗಿ ಕಾಣುತ್ತದೆ. ಕಡು ಬಣ್ಣಗಳಲ್ಲಿ ಇಂಥ ಸೀರೆಗಳು ಬಹಳ ಚಂದ. ಈ ವಿನ್ಯಾಸವನ್ನು 'ನಿಜಾಮ್ ಡಿಸೈನ್ಸ್' ಎಂದೂ ಕರೆಯಲಾಗುತ್ತದೆ. ಈ ಸೀರೆಗಳು ವಿಜಯವಾಡದಲ್ಲಿ ತಯಾರಾಗುತ್ತಿದ್ದು, ಸಾಂಪ್ರದಾಯಿಕತೆಗೆ ಹೇಳಿ ಮಾಡಿಸಿದಂತಿದೆ.

ಸಿಂಪಲ್ ಮಾನೊ ಸ್ಟ್ರಿಪ್ ವಿನ್ಯಾಸಗಳು ಕೂಡ ಸೀರೆಯ ಸೊಬಗನ್ನು ಹೆಚ್ಚಿಸಿವೆ. ಇದರಲ್ಲಿ ಎಲೆಯಾಕಾರ, ಮಾವಿನಕಾಯಿ ವಿನ್ಯಾಸ, ಗಿಣಿ, ನವಿಲಿನ ವಿನ್ಯಾಸ, ಚಿನ್ನದ ನಾಣ್ಯದ ವಿನ್ಯಾಸಗಳು ಹೆಚ್ಚು ಜನಪ್ರಿಯವಾಗಿವೆ. ಮಂಗಳಗಿರಿ ಸೀರೆಯ ಮೇಲೆ ಹಾಕಲಾಗಿರುವ ಎಂಬ್ರಾಯಿಡರಿ ಪ್ರಿಂಟ್ಸ್ ಕೂಡ ಸೀರೆ ಉಟ್ಟ ಮಹಿಳೆಗೆ ಎಲಿಗೆಂಟ್ ಲುಕ್ ಕೊಡುತ್ತದೆ. ಕೈಗೆಟಕುವ ಬೆಲೆಯಲ್ಲಿ ಸಿಗುವ ಈ ಸೀರೆ 1500 ರೂಪಾಯಿಗಳಿಂದ ಸುಮಾರು 8000 ರೂಪಾಯಿಗಳವರೆಗೂ ಇದೆ. ಮಂಗಳಗಿರಿ ಕಾಟನ್ ಸೀರೆಯಲ್ಲಿ ಹೂವುಗಳ ವಿನ್ಯಾಸವುಳ್ಳ ಮಾದರಿಯವು ಕೂಡ ಲಭ್ಯ. ಈ ಪ್ರಿಂಟ್ಸ್ ಸೀರೆ ಅಂಚು ಹಾಗೂ ಪಲ್ಲು ಜರಿಯಿಂದ ಕೂಡಿದ್ದರೆ ಸೀರೆ ಸಖತ್ ಲುಕ್ ಕೊಡುತ್ತದೆ.

ಆನ್‌ಲೈನ್‌ನಲ್ಲಿಯೂ ಮಂಗಳಗಿರಿ ಸೀರೆಗಳು ಲಭ್ಯ. ದೈನಂದಿನ ಕಚೇರಿ ಬಳಕೆಗೆ ಕಾಟನ್ ಸೀರೆಗಳು ಸೂಕ್ತ ಅಲ್ಲದೆ ಈ ಎಲ್ಲ ಸೀರೆಗಳನ್ನು ವಯೋಮಾನದ ಭೇದವಿಲ್ಲದೆ ಯಾರು ಬೇಕಾದರೂ ಆರಾಮವಾಗಿ ಉಟ್ಟುಕೊಳ್ಳಬಹುದು.

ಸಂಪ್ರದಾಯಕ್ಕೆ, ಫ್ಯಾಷನ್‌ಗೆ, ಆಧುನಿಕ ಮನೋಭಾವದ ಮಹಿಳೆಯರಿಗೆ, ನಿತ್ಯ ಕಚೇರಿಗಳಿಗೆ ತೆರಳುವ ಯುವತಿಯರಿಗೆ, ಸೆಲೆಬ್ರಿಟಿಗಳಿಗೆ, ಸಿನಿಮಾ ತಾರೆಗಳಿಗೆ.. ಹೀಗೆ ಸಮಾಜದ ಎಲ್ಲ ಸ್ತರದ ಮಹಿಳೆಯರಿಗೆ ಸೂಕ್ತವಾಗುವಂಥ ಮಂಗಳಗಿರಿ ಸೀರೆಗಳು ಬಹಳ ಬೇಗ ಮಹಿಳೆಯರ ಮನ ತಣಿಸುತ್ತಿದೆ. ಈ ಸೀರೆಗಳು ಎಥ್ನಿಕ್ ಉಡುಪಿನಂತೆಯೂ ಶೋಭಿಸುತ್ತಿವೆ. ಸಾಂಪ್ರದಾಯಿಕತೆಯನ್ನು ಮೀರದೆ ಆಧುನಿಕ ಟ್ರೆಂಡ್‌ನೊಂದಿಗೆ ರಾಜಿ ಮಾಡಿಕೊಳ್ಳದೆ ಇಂದು ಯುವತಿಯರ ಮನಗೆಲ್ಲುತ್ತಿವೆ. ಈ ಉಡುಗೆಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಧರಿಸಬಹುದು. ಫ್ಯಾಷನ್‌ನಲ್ಲೂ ಈ ಸೀರೆ ಮೇಲುಗೈ ಸಾಧಿಸುತ್ತಿದೆ. ಮದುವೆ ಸಂದರ್ಭಗಳಲ್ಲೂ ಬಟ್ಟೆ, ಬಣ್ಣ, ಸ್ಟೈಲ್, ಗ್ಲಾಮರ್ ಮುಂತಾದವುಗಳ ಲೆಕ್ಕಾಚಾರದಿಂದ ಸೀರೆ ಕೊಳ್ಳುವ ಮಹಿಳೆಯರು ಹೆಚ್ಚು ಒತ್ತು ಕೊಡುವುದು ಫ್ಯಾಷನ್‌ಗೇ.



ಹ್ಯಾಂಡ್‌ಲೂಮ್, ಕಾಟನ್ ಸಿಲ್ಕ್ ಸೀರೆ, ಸಲ್ವಾರ್, ದುಪಟ್ಟಾಗಳು ಕೂಡ ಮಂಗಳಗಿರಿ ಬಟ್ಟೆಗಳಲ್ಲಿ ಲಭ್ಯ. ಈ ವಿಶಿಷ್ಟ ಸೀರೆ ತನ್ನ ವೈವಿಧ್ಯದಿಂದಾಗಿ ದೇಶ, ವಿದೇಶಗಳಲ್ಲಿ ಹೆಸರು ಗಳಿಸುತ್ತಿದೆ. ಹಿಂದೆಯೂ ಮಂಗಳಗಿರಿ ಸೀರೆ ಇತ್ತು, ಹಾಗಾಗಿ ಇದು ದಿಢೀರ್ ಎಂದು ಮಾರುಕಟ್ಟೆಗೆ ಬಂದ ಸೀರೆಯಲ್ಲ. ಹಿಂದೆಯೂ ಈ ಸೀರೆಯನ್ನು ಮಹಿಳೆಯರು ಇಷ್ಟಪಟ್ಟು ಉಟ್ಟುಕೊಳ್ಳುತ್ತಿದ್ದರು. ಹೊಸ ಹೊಸ ತಂತ್ರಜ್ಞಾನ, ಆಧುನಿಕ ವಿನ್ಯಾಸ, ಆಕರ್ಷಕ ಶೈಲಿ ಹಾಗೂ ಹೆಚ್ಚುತ್ತಿರುವ ಬೇಡಿಕೆಗಳಿಂದಾಗಿ ಇಂದು ಮಂಗಳಗಿರಿ ಸೀರೆಗಳು ಅತ್ಯಂತ ಜನಪ್ರಿಯವಾಗಲು ಸಹಕಾರಿಯಾಯಿತು. ಸೀರೆಯ ಮೇಲೆ ಕೈಕುಸುರಿಯಿಂದ ಮಾಡಿದ ಕಲಾತ್ಮಕ ವಿನ್ಯಾಸದಿಂದಾಗಿ ಸೀರೆ ಮದುವೆ ಹೆಣ್ಣಿಗೂ ಮೆಚ್ಚುವಂತಿದೆ; ಮದುವೆ, ರಿಸೆಪ್ಶನ್‌ಗಳಂತಹ ಸಮಾರಂಭಗಳಿಗೆ ಉಟ್ಟುಕೊಳ್ಳಲು ಯೋಗ್ಯವಾಗಿದೆ. ರೇಷ್ಮೆ ಜರಿಗಳಿಂದ ಮಾಡಿದ ವಿನ್ಯಾಸ ಮಹಿಳೆಯರ ಮನಸೂರೆಗೊಳ್ಳುವಂತಿದೆ. ಕಡು ಬಣ್ಣಗಳಿಂದ ಕೂಡಿದ ಸೀರೆ ಚಿತ್ತಾಕರ್ಷಕವಾಗಿದ್ದಲ್ಲದೆ ಸೀರೆಯ ಪಲ್ಲು ಅತ್ಯಂತ ಸೊಗಸಾಗಿದೆ.

ಮಹಿಳೆಯರ ಸೀರೆ ತಿಜೋರಿಯಲ್ಲಿ ಮಂಗಳಗಿರಿ ಸೀರೆಗಳೂ ಸೇರಿಕೊಂಡರೆ ಸಂಭ್ರಮದ ದಿನಗಳಲ್ಲಿ ಇನ್ನಷ್ಟು ಮಿಂಚಬಹುದು. ■